ಮಾನ್ಯ ಶ್ರೀ ಟಿ. ಮರಿಯಪ್ಪನವರು.—530 ಎಕರೆಗೆ ಆಗುವಷ್ಟು ಇದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—530 ಎಕರೆಗೆ ಆಗುತ್ತದೆ ಎಂದು ಹೇಳುತ್ತೀರೇ ವಿನಾ ಕೆರೆಯಲ್ಲಿ ಎಷ್ಟು ನೀರಿದೆ ಎಂಬುದನ್ನು ಅಜಮಾಯಿಷಿ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಶೀಲಿಸಿ ನೋಡಿ, ಕೊನೆಗೆ ಬರತಕ್ಕ ನೀರು 530 ಎಕರೆಗೆ ಮಾತ್ರ ಸಾಕಾಗುತ್ತದೆ ಎಂದು ಪ್ರವೀಣರು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆ ಕೆರೆಯಲ್ಲಿ ಹಾಲಿ ಎಷ್ಟು ಯೂನಿಟ್ ನೀರು ಇದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕೆ. ಎಚ್. ಮುದಿಯಪ್ಪನವರು.—3,275 ಯೂನಿಟ್ ನೀರು ಹಿಡಿಯತಕ್ಕ ಕೆರೆ ಕಟ್ಟಿಸುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಅನೇಕ ಕಾರಣಗಳ ಮೇಲೆ ಅವಲಂಬಿಸಿರುತ್ತದೆ. ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹೆಚ್ಚು ಆಹಾರ ಬೆಳೆ ಬೆಳೆಯುವ ಸಂಬಂಧದಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳ ಕೆಲಸ ಮಾಡುತ್ತಿರುವಾಗ, ದೊಡ್ಡ ಕೆರೆಗಳನ್ನು ಅದಷ್ಟು ಜಾಗ್ರತೆ ದುರಸ್ತುಮಾಡಬೇಕೆಂಬ ನಿಯಾಮಕ ಇದಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಕೇಳುವ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ದೇವನೂರು ಕೆರೆಯಿಂದ ಫೀಡರ್ ಚಾನಲ್ ಹಾಕಿದರೆ ನೀರು ಬರುತ್ತದೆ ಎಂದು ಒಪ್ಪಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಲಕ್ಷ ರೂಪಾಯಿ ಖರ್ಚುಮಾಡಿದರೆ ಬರುತ್ತದೆ. ಅದು ಬಂದರೆ ಇನ್ನೊಂದು ಕೆರೆಗೆ ಕಷ್ಟವಾಗುತ್ತದೆ?

ಶ್ರೀ ಕೆ. ಎಚ್. ಮುದಿಯಪ್ಪನವರು.—ಯಾವ ಕೆರೆಗೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಾಣಿ ವಿಲಾಸ ಸಾಗರಕ್ಕೆ ಬಹಳ ತೊಂದರೆಯಾಗುತ್ತದೆ. 10 ಸಾವಿರ ಎಕರೆಗೆ ಅಲ್ಲಿನ ನೀರು ಸಾಕಾಗದೇ ಇರುವುದರಿಂದ ಅಲ್ಲಿಗೆ ನೀರು ಕಡಿಮೆ ಮಾಡುವುದಕ್ಕಾಗುವುದಿಲ್ಲವೆಂದು ಪ್ರವೀಣರ ಅಭಿಪ್ರಾಯ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಬಲದ ದಡದ ನಾಲೆಯ ಕೆಳಗೆ ಇರತಕ್ಕ ರೈತರಿಗೆ ರೆಮಿಷ್ಷ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಅವರು ಬತ್ತದ ಬೆಳೆ ಬೆಳೆದರೆ ನಿಜವಾಗಿಯೂ ರೆಮಿಷ್ಷಗೆ ಅರ್ಹರು.

ಶ್ರೀ ಕೆ. ಎಚ್. ಮುದಿಯಪ್ಪನವರು.—ರೆಮಿಷ್ಷ ಕೊಡದೆ ಕಂದಾಯ ವಸೂಲು ಮಾಡುತ್ತಾ ಇರುವುದು ಸರಿಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ನಮ್ಮ ಗಮನಕ್ಕೆ ಬಂದಿಲ್ಲ. ನೀರು ಕೊಡುವವರು ಪಬ್ಲಿಕ್ ವರ್ಕ್ಸ್ ಇಲಾಖೆಯವರು, ಕಂದಾಯ ವಸೂಲು ಮಾಡುವವರು ರೆವಿನ್ಯೂ ಇಲಾಖೆಯವರು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಇದನ್ನು ವಿಚಾರಣೆ ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೂಡಲೆ ವಿಚಾರ ಮಾಡಿ ತಾವು ಹೇಳಿದಂತೆ ಕಂದಾಯ ವಸೂಲು ಮಾಡಿದ್ದರೆ ರೆಮಿಷ್ಷ ಕೊಡಿಸಲಾಗುತ್ತದೆ ಎಂಬ ಭರವಸೆ ಇಟ್ಟುಕೊಳ್ಳಬಹುದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಫೀಡರ್ ಚಾನಲ್ ತಂದ ಪಕ್ಷದಲ್ಲಿ ಎತ್ತರದ ಮಟ್ಟದಲ್ಲಿರುವ ಬಲದದದ ನಾಲೆಗೂ ನೀರು ಬರುತ್ತದೆ. ಎಂದ ಮೇಲೆ ತಾವು ಯಾವಾಗಲಾದರೂ ಪ್ರವಾಸ ಬಂದಾಗ ಆ ಸ್ಥಳವನ್ನು ಅಜಮಾಯಿಷಿ ಮಾಡಿಸುವುದಕ್ಕೆ ಪ್ರಯತ್ನಪಡುತ್ತೀರಾ?

The Hon'ble Sri T. MARIAPPA—It is a regular representation and I will consider that · I have no objection to inspect it when I visit that area.

Repairs to major and minor tanks in Hole-Narsipur Taluk.

Q.—290. **Sri S. C. SOORYANARAYANA CHETTY** (Hassan District—General).—

Will the Government be pleased to state :—

(*a*) the number of major and minor tanks in Hole-Narsipur Taluk (Hobliwar information to be furnished) ;

(*b*) out of this, the tanks that are repaired during the past three years ;

(*c*) the tanks that are not repaired ;

(*d*) the number of tanks that are arranged to be repaired during the present year ; which they are ?

A.—**The Hon'ble Sri T. MARIAPPA** (Home Minister).—

(*a*) *Name of Hobli*	*Major Tanks*	*Minor Tanks*
Kasaba Hobli	5	99
Hallimysore	7	139
Halekote ...	4	81
	16	319
(*b*)	2	37
(*c*)	14	282
(*d*)	...	28

DETAILS FOR (*d*).

Hallimysore Hobli.

1. Lakkur minor tank
2. Eregowdanakatte of Jakkanahalli.

3. Tejur Doddakere
4. Mundanahalli tank
5. Helagatta tank
6. Bidiganahalli tank
7. Keragodi tank
8. Chickchagalli tank
9. Odahalli tank
10. Konganakere of Sravanur tank.
11. Feeder channel of Kengankere.
12. Hallimysore Doddakere
13. Odanahalli tank
14. Dalavoy tank
15. Chamanahalli tank pipe sluice.
16. Turfing to Chamanakatte
17. Hullikere of Kabbur
18. Ankanahalli tank
19. Channanakatte of Settarakoppal.

Halekote Hobli.

1. Sluice of Amanidodakere
2. Closing leaks in Amanikere
3. Amanichikkere
4. Kuncha ane

Kasaba Hobli.

1. Yelachagalli tank
2. Chigalli tank
3. Kowchalakatte of Muddanippe.
4. Amani Henekere tank
5. Konganakere of Shravanur tank.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಸ್ವಾಮಿ, ಈ 319 ಕೆರೆಗಳ ಪೈಕಿ ಕೇವಲ 37 ಕೆರೆಗಳು ಮಾತ್ರ ಮೂರು ವರ್ಷದಲ್ಲಿ ದುರಸ್ತಾಗಿವೆ. ಇನ್ನೂ 282 ಮೈನರ್ ಕೆರೆಗಳು, 14 ಮೇಜರ್ ಕೆರೆಗಳು ದುರಸ್ತಾಗದೆ ಇರುವುದನ್ನು ಯಾವಾಗ ದುರಸ್ತು ಮಾಡಿಸುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು :—ಎಲ್ಲಾ ಕೆರೆಗಳೂ ನಾದುರಸ್ತಾಗಿವೆ ಎಂದು ಹೇಳಬೇಡಿ. ದುರಸ್ತಾಗಬೇಕಾಗಿರುವ ಕೆರೆಗಳು ಅಷ್ಟಿವೆ. ಅವು ಉಪಯೋಗದಲ್ಲವೆ. ರೈತನು ಮುಚ್ಚಳಿಕೆ ಬರೆದುಕೊಡಬೇಕು. ಅದು ಕಾಲ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—(d) ಪ್ರಶ್ನೆಗೆ ಉತ್ತರವಾಗಿ ಚಾಲ್ತಿ ಸಾಲಿನಲ್ಲಿ 28 ಕೆರೆಗಳು ಮಾತ್ರ ದುರಸ್ತಿಗೆ ಏರ್ಪಾಟಾಗಿದೆ ಎಂದು ಹೇಳಿದ್ದೀರಿ. ಅದು ಕೇವಲ ಕಮ್ಮಿ ಅಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು :—ಆ ಒಂದು ತಾಲ್ಲೂಕಿನಲ್ಲಿ 28 ಕೆರೆಗಳು ಈ ವರ್ಷ ದುರಸ್ತಿಗೆ ಬರುತ್ತವೆ. ಇದೇ ರೀತಿ ತಾವು 80 ತಾಲ್ಲೂಕಿಗೂ ಲೆಕ್ಕ ಹಾಕಿದರೆ ಬಹಳ ಜಾಸ್ತಿ ಆಗುತ್ತವೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ಕಾಮಗಾರಿಗಾಗಿ ಬೇಕಾಗುವಷ್ಟು ಹಣ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆರೆ, ಕಟ್ಟೆಗಳಿಗೆ ಬೇಕಾದಷ್ಟು ಹಣ ಇದೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಹಣ ಇದ್ದೂ ಕೆಲಸ ಏಕೆ ನಿಧಾನವಾಗುತ್ತಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆರೆ ಕೆಲಸವೇ ನಿಧಾನ. Working season ಇರುವುದು 5 ತಿಂಗಳು. ಮಳೆಗಾಲದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಮತ್ತು ಸಾಮಾನುಗಳು ಸಿಕ್ಕಬೇಕು. ಆಕಸ್ಮಾತ್ತಾಗಿ ಬೇಸಿಗೆಯಲ್ಲಿ ಕೆರೆಯಲ್ಲಿ ನೀರಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಸ್ವಾಭಾವಿಕವಾದ ತೊಂದರೆಗಳಿವೆ. ಆದಷ್ಟು ಜಾಗ್ರತೆ ಮಾಡಬೇಕೆಂದಿದೆ. ನಿಮ್ಮ ತಾಲ್ಲೂಕಿನಲ್ಲೂ ಜಾಗ್ರತೆ ಕೆಲಸ ನಡೆಸರಾಗುತ್ತದೆ ಎಂಬ ಭರವಸೆ ಕೊಡುತ್ತೇನೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ತಾಲ್ಲೂಕಿನಲ್ಲಿ ಕಂಟ್ರಾಕ್ಟರುಗಳು ಹೆಚ್ಚಿನ ಸಂಖ್ಯೆಯಲ್ಲಿ ದ್ದಾರಲ್ಲವೆ ? ಆದ್ದರಿಂದ ತಾವು ಕಂಟ್ರಾಕ್ಟರುಗಳೇ ಇಲ್ಲವೆಂದು ಹೇಳುವ ಹಾಗಿಲ್ಲ ಅಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಂಟ್ರಾಕ್ಟರುಗಳೇನೋ ಹೆಚ್ಚಾಗಿದ್ದಾರೆ. ಆದರೆ ಅವರು ಕೇಳುವ ದರದಂತೆ ಕೊಡುವುದೇ ಕಷ್ಟ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಆದಷ್ಟು ಜಾಗ್ರತೆ ಮಾಡಿಸಿಕೊಡುತ್ತೀರಾ ?

The Hon'ble Sri T. MARIAPPA.—In fact, I have already issued instructions with regard to the repairs of 30 to 40 minor tanks. They would be taken up.

Mr. SPEAKER.—There are no more questions for the day.

Sri. L. SIDDAPPA.—The resources of the Government are exhausted! (laughter).

QUESTIONS FOR ANSWERS ON THE DAY.

(Not taken up)

Putting up Public Buildings in Davangere.

Q.—86. **Sri H. SIDDAVEERAPPA** (Chitaldrug District—General).—

Will the Government be pleased to state :—

(*a*) the total monthly amount of rent paid by them for all public buildings located in Davangere ;

(*b*) whether they propose to put up suitable public buildings at an early date ?